

# ಮಕ್ಕಳ ಹಕ್ಕುಗಳಿಗೆ ದೊಡ್ಡವರೇ ಶ್ರಮಿಸಬೇಕು



**ಮಗುವಿನ ಹೃದಯದಲ್ಲಿ ಅಪ್ಪನ ನೆನಪುಗಳು ಸುಂದರವಾಗಿರಲಿ ಎಂದು ಅಮ್ಮನೂ, ಅಮ್ಮನ ಅಕ್ಕರೆ ಪ್ರೀತಿಯ ನೆನಪುಗಳು ಮಗು ಮನಸ್ಸಿನಲ್ಲಿ ಚೆಂದವಾಗಿ ಪಡಿಮೂಡಲಿ ಎಂದು ಅಪ್ಪನೂ ನಿರಂತರ ಶ್ರಮಿಸುವುದು ಪೋಷಣೆಯ ಒಂದು ಮುಖ್ಯ ಭಾಗ.**

■ ಸ್ವಯಂಪ್ರಭಾ

ತಮ್ಮ ತಮ್ಮ ಬದುಕಿನ ಹಕ್ಕುಗಳ ಬಗ್ಗೆ ಮಾತನಾಡುವುದು ಎಲ್ಲರಿಗೂ ಬಹಳ ಇಷ್ಟವಾದ ಸಂಗತಿ. ಮುಕ್ತವಾದ ಬದುಕಿಗೆ ಮನಸ್ಸು ಸದಾ ಹಾತೊರೆಯುತ್ತದೆ. ಮನಸ್ಸಿಗೆ ಬೇಕೆನಿಸಿದಾಗ, ಬೇಕೆಂಬ ನಿರ್ಧಾರವನ್ನು ಮಾಡುವ ಮುಕ್ತತೆಗೆ ಯಾರ ಮನಸ್ಸು ಇಚ್ಛಿಸುವುದಿಲ್ಲ ಹೇಳಿ. ಆದರೆ ಮನುಷ್ಯರು ರೂಪಿಸಿಕೊಂಡ ಸಾಮಾಜಿಕ ಬದುಕು ಹಾಗಿಲ್ಲ. ಅವರ ಹಕ್ಕುಗಳನ್ನು ಇವರು, ಇವರ ಹಕ್ಕುಗಳನ್ನು ಅವರು ಮನ್ನಿಸಿದರೆ ಮಾತ್ರ ಸಹಬಾಳ್ವೆ, ಶಾಂತಿಯ ಬದುಕು ಸಾಧ್ಯ. ಅಲ್ಲೊಂದು ಸಣ್ಣಮಟ್ಟಿಗಿನ ತ್ಯಾಗದ ಅಪೇಕ್ಷೆ ಇರುತ್ತದೆ.

ಎಲ್ಲರ ಹಕ್ಕುಗಳ ಬಗ್ಗೆ ಮಾತನಾಡುವಾಗ, ಮಕ್ಕಳ ಹಕ್ಕುಗಳೂ ಅನ್ವಯವಾಗುತ್ತವೆಯಷ್ಟೇ. ಮಾನವೀಯವಾಗಿ ಯೋಚಿಸುವುದಾದರೆ, ಮಕ್ಕಳ ಹಕ್ಕುಗಳನ್ನು ಪ್ರತ್ಯೇಕವಾಗಿ ವಿವರಿಸಿ ಹೇಳಬೇಕಿಲ್ಲ. ದೊಡ್ಡವರು ತಮ್ಮ ಬಾಲ್ಯದಲ್ಲಿ ಎದುರಿಸಿದ ಸಂದರ್ಭಗಳೇ ಎಷ್ಟೋ ಬಾರಿ, ಅವರ ಮಕ್ಕಳನ್ನು ಸಾಕುವ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. ಅವೇ ನೆನಪುಗಳು ಮಕ್ಕಳನ್ನು ಬೆಳೆಸುವಾಗ 'ಪಾಠ'ಗಳಾಗಿರುತ್ತವೆ.

'ನಾನು ಚಿಕ್ಕವನಿದ್ದಾಗ, ದೊಡ್ಡಪ್ಪ ಎಷ್ಟೊಂದು ಕೆಟ್ಟವರಾಗಿದ್ದರು. ಬಾರುಕೋಲಿನಿಂದ ಬಾರಿಸಿ, ಕೆಲಸ ಮಾಡಿಸುತ್ತಿದ್ದರು' ಎಂದೋ, 'ನನ್ನ ಬಾಲ್ಯದಲ್ಲಿ ಬೇರೆಯವರ ಮನೆಕೆಲಸ ಮಾಡಬೇಕಿತ್ತು, ಅಲ್ಲಿ ಕೊಡುವ ಸಂಬಳವನ್ನು ಮನೆಗೆ ತಂದು ಕುಡುಕ ಅಪ್ಪನಿಗೆ ಕೊಡಬೇಕಿತ್ತು' ಎಂದೋ ಅನುಭವದ ಕಥೆಗಳನ್ನು ಕೇಳುತ್ತಿರುತ್ತೇವೆ. ಈ ಅನುಭವದ ಕಥೆಗಳು ತಮ್ಮ ಮಕ್ಕಳನ್ನು ಬೆಳೆಸುವ ಸಂದರ್ಭದಲ್ಲಿ ನೆನಪಿಗೆ ಬರುವಂತೆಯೇ, ಇತರರ ಮಕ್ಕಳನ್ನು ನಾವು ಹೇಗೆ ನಡೆಸಿಕೊಳ್ಳುತ್ತೇವೆ ಎಂಬ ಸಂದರ್ಭದಲ್ಲಿಯೂ ನೆನಪಿಗೆ ಬಂದರೆ, ನಾವು ಮಕ್ಕಳ ಹಕ್ಕುಗಳನ್ನು ರಕ್ಷಿಸಿದಂತಾಗುತ್ತದೆ. ಯಾಕೆಂದರೆ ನಾವು ಮಗುವೊಂದರ ದೊಡ್ಡಪ್ಪನಾಗಿಯೋ, ಚಿಕ್ಕಮ್ಮನಾಗಿಯೋ, ಮಾವನಾಗಿಯೋ ಇರುತ್ತೇವೆ. ನಮ್ಮ ಬಾಲ್ಯದ ಕೆಟ್ಟ ಅನುಭವಗಳು ನಮ್ಮ ಮಕ್ಕಳಿಗಾಗಬಾರದು ಎಂಬ ತುಡಿತವಷ್ಟೇ ಅಲ್ಲ, ಬೇರೆಯವರ ಮಕ್ಕಳಿಗೂ ಅಂತಹ ಅನುಭವಗಳಾಗಬಾರದು ಎಂಬ ಎಚ್ಚರಿಕೆಯೂ ಮನದಲ್ಲಿರಬೇಕು.

ಇದೇ ಮಾತು ಮಕ್ಕಳ ಅಪ್ಪ ಅಮ್ಮನಿಗೂ ಅನ್ವಯಿಸುತ್ತದೆ. ದಾಂಪತ್ಯದಲ್ಲಿ ವೈಯಕ್ತಿಕ ಹಕ್ಕುಗಳ ಬಗ್ಗೆ ಮಾತನಾಡುವ ವೇಳೆಯಲ್ಲಿ ಮಕ್ಕಳ ಹಕ್ಕುಗಳನ್ನು ಗೌರವಿಸಬೇಕಾಗಿದೆ ಎಂಬ ಋಣಭಾವವೊಂದು ಪೋಷಕರಲ್ಲಿ ಸದಾ ಜಾಗೃತವಾಗಿ ಇರಬೇಕಾಗುತ್ತದೆ. 'ಋಣಭಾವ' ಏಕೆಂದರೆ, ಪ್ರೌಢರು ತಮ್ಮ ಹಕ್ಕುಗಳ ಬಗ್ಗೆ ಮಾತನಾಡಿದಂತೆ, ಮಕ್ಕಳು ತಮ್ಮ ಹಕ್ಕುಗಳೇನೇನು ಎಂದು ದೊಡ್ಡವರ ಮುಂದೆ ಪ್ರತಿಪಾದಿಸಲಾರರು. ಅದಕ್ಕಾಗಿ ಹೋರಾಟ ಮಾಡಲಾರರು. ಅವರ ಹಕ್ಕುಗಳೇನು ಎಂಬುದನ್ನು ದೊಡ್ಡವರೇ ಗುರುತಿಸಿ, ಅವುಗಳನ್ನು ಪೊರೆಯಬೇಕಾಗುತ್ತದೆ.

ದಾಂಪತ್ಯದಲ್ಲಿ ವಿರಸವುಂಟಾಗಿ ಸಂಬಂಧವು ವಿಚ್ಛೇದಕ್ಕೆ ತಲುಪಿದಾಗ, ಮಕ್ಕಳ ಪಾಲನೆಯ ಹೊಣೆಯನ್ನು ನಿರ್ಧರಿಸಬೇಕಾದ ಸಂದರ್ಭ ಎದುರಾಗುತ್ತದೆ. ಅಂತಹ ಸಂದರ್ಭಗಳಲ್ಲಿ, 'ಹೆತ್ತವರ ಹಕ್ಕುಗಳು ಅಪ್ರಸ್ತುತ. ಮಗುವಿನ ಹಿತಚಿಂತನೆಯೇ ಮುಖ್ಯ' ಎಂದು ಸುಪ್ರೀಂಕೋರ್ಟ್ ಹೇಳಿದೆ. ಅಪ್ರಾಪ್ತ ವಯಸ್ಸಿನ ಮಗುವಿನ ಪೋಷಣೆ ಯಾರಿಗೆ ವಹಿಸಬೇಕೆಂದು ನಿರ್ಧರಿಸುವಾಗ ಮಗುವಿನ ಹಿತವೇ ಮುಖ್ಯವಾಗುತ್ತದೆ ಎಂದು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಎ.ಎಸ್. ಓಕಾ ಅವರಿದ್ದ ಪೀಠ ಹೇಳಿದೆ. ಅಮೆರಿಕದಲ್ಲಿರುವ ತಂದೆಯ ಬಳಿಗೆ ಮಗುವನ್ನು ಕಳುಹಿಸುವ ಪ್ರಕರಣವೊಂದಕ್ಕೆ ಸಂಬಂಧಿಸಿದ ತೀರ್ಪು ಇದಾದರೂ, ಇದರಲ್ಲಡಗಿರುವ ಸಂದೇಶ ಎಲ್ಲರಿಗೂ ಅನ್ವಯಿಸುವಂತಿದೆ.

ಪೋಷಕರು ತಮ್ಮ ಬಾಲ್ಯ ನೆನೆದಾಗ ನೆನಪಾಗುವುದು ಅಪ್ಪ– ಅಮ್ಮ. ಎಷ್ಟೇ ದೊಡ್ಡವರಾಗಿ, ಸಾಧನೆಗೈದಿದ್ದರೂ ಅಪ್ಪ ಮತ್ತು ಅಮ್ಮನ ಚಿತ್ರವೊಂದು ಹೃದಯದಲ್ಲಿ ಸದಾ ಅಚ್ಚಾಗಿರುತ್ತದೆ. ಅವೆರಡು ಕೋಶಗಳು ಬದುಕಿನ ಪ್ರೇರಣೆಯಾಗಿರುತ್ತವೆ. ಅಪ್ಪನಾದವನು ಒಳ್ಳೆಯವನಿರಲಿ, ಕೆಟ್ಟವನಿರಲಿ, ಕುಡುಕನಿರಲಿ, ಹುಂಬನಿರಲಿ, ವ್ಯಕ್ತಿಯೊಬ್ಬನ ಮನಸ್ಸಿನಲ್ಲಿ ಅಪ್ಪನ ಚಿತ್ರಕ್ಕೆ ಬಣ್ಣಗಳು ತುಂಬುತ್ತ ಹೋಗುತ್ತವೆ. ಅಮ್ಮನ ಚಿತ್ರದಲ್ಲಿಯೂ ಆಕೆಯ ವಾತ್ಸಲ್ಯವೋ, ಪ್ರೀತಿಯೋ, ನಿರ್ಲಕ್ಷ್ಯವೋ, ಸಿಟ್ಟೋ ಬಣ್ಣಗಳಂತೂ ತುಂಬುವುದು ಖಂಡಿತ. ಅಪ್ಪನೆಂದರೆ ಗೌರವ, ಹೆಮ್ಮೆ ಇರಬಹುದು, ಸಿಟ್ಟು ಇರಬಹುದು ಅಥವಾ ಬೇಸರವಿರಬಹುದು. ಅಮ್ಮನೆಂದರೆ ಪ್ರೀತಿಯೋ, ವಾತ್ಸಲ್ಯವೋ ಅಥವಾ ಬೇಸರವೋ ಕವಿದಿರಬಹುದು. ಏನೇ ಆದರೂ ಅವು ಸ್ಫೂರ್ತಿ ನೀಡುವ ಕೋಶಗಳಾಗಿರುತ್ತವೆ. ಮಕ್ಕಳ ಹೃದಯದಲ್ಲಿ ಹೆತ್ತವರ ಕುರಿತಂತೆ ನಿಧಾನಕ್ಕೆ ರೂಪುಗೊಳ್ಳುತ್ತಾ ಹೋಗುವ ವಿಷಾದ ಅಥವಾ ಹೆಮ್ಮೆಯ ಕೋಶಗಳನ್ನು ಅಳಿಸುವ ಹಕ್ಕುಗಳು ಅಪ್ಪ ಅಮ್ಮನಿಗಿಲ್ಲ. ಸಾಧ್ಯವಾದಷ್ಟೂ ಆ ಕೋಶಗಳೆರಡನ್ನೂ ಪೊರೆಯುವ ಜವಾಬ್ದಾರಿ ಅಪ್ಪ ಅಮ್ಮನದ್ದಾಗಿರುತ್ತದೆ.

ಮಗುವಿನ ಹೃದಯದಲ್ಲಿ ಅಪ್ಪನ ನೆನಪುಗಳು ಸುಂದರವಾಗಿರಲಿ ಎಂದು ಅಮ್ಮನೂ, ಅಮ್ಮನ ಅಕ್ಕರೆ ಪ್ರೀತಿಯ ನೆನಪುಗಳು ಮಗು ಮನಸ್ಸಿನಲ್ಲಿ ಚೆಂದವಾಗಿ ಪಡಿಮೂಡಲಿ ಎಂದು ಅಪ್ಪನೂ ನಿರಂತರ ಶ್ರಮಿಸುವುದು ಪೋಷಣೆಯ ಒಂದು ಮುಖ್ಯ ಭಾಗ. ಈ ಜಂಟಿ ನಡಿಗೆ ಮಗುವಿನ ಮನಸ್ಸಿನಲ್ಲಿ ಸಕಾರಾತ್ಮಕ ಭಾವನೆಯನ್ನು ಬಿತ್ತುವುದಕ್ಕೆ ನೆರವಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in